# ಸಿಡ್ನಿಯಲ್ಲಿ ಸಂಗೀತಾ ಕಟ್ಟಿ ಅವರಿಂದ "ಸ್ವರ ಮಾಧುರ್ಯ" ಕಾರ್ಯಕ್ರಮ.

ಆಸ್ಟ್ರೇಲಿಯಾದ ಸಿಡ್ನಿ ಕನ್ನಡ ಸಂಘವು ಕನ್ನಡದ ಶಾಸ್ತ್ರೀಯ ಸಂಗೀತ ಲೋಕದ ಹೆಸರಾಂತ ಗಾಯಕಿ ಶ್ರೀಮತಿ ಸಂಗೀತಾ ಕಟ್ಟಿಯವರ "ಸ್ವರ ಮಾಧುರ್ಯ" ಕಾರ್ಯಕ್ರಮವನ್ನು ಇತ್ತೀಚೆಗೆ ಏರ್ಪಡಿಸಿತ್ತು. ಈ ಕಾರ್ಯಕ್ರಮವು ಸಿಡ್ನಿಯ ಕನ್ನಡಿಗರಿಗೆಲ್ಲ ಸಂಗೀತದ ರಸದೌತಣದ ಅನುಭವವನ್ನು ನೀಡಿ ಎಲ್ಲ ಕನ್ನಡಿಗರ ಪ್ರಶಂಸೆಗೆ ಪಾತ್ರವಾಯಿತು.
ಸಿಡ್ನಿ ಕನ್ನಡ ಸಂಘವು ಪ್ರತಿ ವರ್ಷ ಕರ್ನಾಟಕದಿಂದ ಹೆಸರಾಂತ ಗಾಯಕರು ಮತ್ತು ಹಾಸ್ಯಗಾರರನ್ನು ಆಮಂತ್ರಿಸಿ ಕಾರ್ಯಕ್ರಮ ಏರ್ಪಡಿಸುತ್ತದೆ. ಈ ವರ್ಷದ ಕಾರ್ಯಕ್ರಮವು ಜೂನ್ ೨೦ ರ ಸಂಜೆ ಸಿಡ್ನಿಯ ಉಪನಗರ ಉತ್ತರ ರೈಡ್ ಸಭಾಂಗಣದಲ್ಲಿ ಜರುಗಿತು.










ಸಿಡ್ನಿ ಕನ್ನಡ ಸಂಘವು ನಡೆಸುತ್ತಿರುವ ಬ್ಲ್ಯಾಕ್‌ಟೌನ್ ಸುಗಮ ಕನ್ನಡ ಶಾಲೆಯ ವಿಧ್ಯಾರ್ಥಿಗಳು ಹಾಡಿದ ಗಣೇಶನ ಪ್ರಾರ್ಥನೆಯೊಂದಿಗೆ ಸಮಾರಂಭವು ಆರಂಭವಾಯಿತು.



ಕಾರ್ಯಕ್ರಮದ ಮೊದಲನೆಯ ಭಾಗದಲ್ಲಿ ಶ್ರೀಮತಿ ಸಂಗೀತಾ ಅವರು ಕನ್ನಡದ ದಾಸರ ಪದಗಳು, ಬಸವಣ್ಣನವರ ವಚನಗಳು, ಶಿಶುನಾಳ ಶರೀಫರ ಕೃತಿಗಳು, ದ. ರಾ. ಬೇಂದ್ರೆ ಮುಂತಾದ ಕವಿಗಳ ಕವಿತೆಗಳು ಹಾಗೂ ಜಾನಪದ ಗೀತೆಗಳಿಂದ ನೆರೆದ ಸಭಿಕರನ್ನು ಮಂತ್ರಮುಗ್ಧಗೊಳಿಸಿದರು. ಎಲ್ಲ ಹಾಡುಗಳನ್ನು ಭಾವಪೂರ್ಣವಾಗಿ ಹಾಡಿ ತಮ್ಮ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಪಾಂಡಿತ್ಯವನ್ನು ಪರಿಚಯಿಸಿದರು. ಅವರು ಸುಶ್ರಾವ್ಯವಾಗಿ ಹಾಡಿದ ಗೀತೆಗಳನ್ನು ಕೇಳುತ್ತ ಕೇಳುತ್ತ ಸಮಯ ಸರಿದದ್ದು ತಿಳಿಯಲೇ ಇಲ್ಲ.













ಊಟದ ನಂತರ ಜರುಗಿದ ಎರಡನೆಯ ಭಾಗದಲ್ಲಿ ಸಂಗೀತಾರವರು ತಮ್ಮ ಮೆಚ್ಚಿನ "ಸಂಗೀತ ಸರಿತಾ" ಪ್ರಾಯೋಗಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಂಗೀತ ಸರಿತಾ ಒಂದು ಹೊಸ ಪ್ರಯೋಗವಾದರೂ ಸಂಗೀತಾ ಅವರ ಬಹಳ ಜನಪ್ರೀಯ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಸಭಿಕರಿಗೆ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಪರಿಚಯಿಸುತ್ತ ರಾಗಗಳಾದ ಯಮನ್, ಪಹಾಡಿ ಮತ್ತು ಭೈರವಿ ರಾಗಗಳನ್ನು ಕೇಳುಗರಿಗೆ ವಿವರಿಸಿದರು ಮತ್ತು ಸಭಿಕರಿಂದಲೇ ಹಾಡಿಸಿದರೂ ಕೂಡ.



ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ತಿಳುವಳಿಕೆ ಇಲ್ಲದವರಿಗೂ ಅರಿವಾಗುವಂತೆ ವಿವರಿಸಿದರು. ಹಳೆಯ ಮತ್ತು ಹೊಸ ಚಲನ ಚಿತ್ರಗಳಲ್ಲಿ ಹೇಗೆ ಈ ರಾಗಗಳನ್ನು ಅಳವಡಿಕೊಳ್ಳಲಾಗಿದೆ ಎನ್ನುವದನ್ನು, ಹಿಂದಿ ಮತ್ತು ಕನ್ನಡ ಚಲನ ಚಿತ್ರಗಳ ಗೀತೆಗಳನ್ನು ತಾವು ಹಾಡಿ, ಸಭಿಕರಿಂದ ಹಾಡಿಸಿ ಸಂಗೀತದ ಸ್ಥೂಲ ಪರಿಚಯ ಮಾಡಿಸಿದರು. ಸಂಗೀತವು ಯಾವ ಭಾಷೆಯಲ್ಲಿಯೇ ಆದರೂ ಕೇವಲ ಏಳು ಸ್ವರಗಳನ್ನು ಆಧರಿಸಿದೆ ಎಂದು ತಿಳಿಸಿದರು. ಕನ್ನಡ, ಹಿಂದಿ, ಮರಾಠಿ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಮಾತನಾಡುತ್ತ ಸಂಗೀತವಲ್ಲದೇ, ವಿವಿಧ ಭಾಷೆಗಳಲ್ಲಿ ಅವರಿಗಿರುವ ಪಾಂಡಿತ್ಯವನ್ನು ಎಲ್ಲರಿಗೂ ಪರಿಚಯಿಸಿದರು. ಹಳೆಯ ಹಿಂದಿ ಮತ್ತು ಕನ್ನಡ ಹಾಡುಗಳನ್ನು ಕೇಳುತ್ತ ಮತ್ತು ಹಾಡುತ್ತ ಸಂಗೀತದಲ್ಲಿ ಮೈಮರೆತ ಸಭಿಕರಿಗೆ ವೇಳೆ ಮಧ್ಯರಾತ್ರಿ ಮೀರಿದ್ದು ಅರಿವಾಗಲೇ ಇಲ್ಲ.

ಶ್ರೀಮತಿ ಸಂಗೀತಾ ಕಟ್ಟಿಯವರಿಗೆ ಸೂಕ್ತ ಮತ್ತು ದಕ್ಷ ತಬಲಾ ವಾದನದ ಜೊತೆ ಕೊಟ್ಟವರು ಶ್ರೀ: ಉದಯರಾಜ್ ಕರ್ಪೂರ್. ಉದಯರಾಜ್ ತಮ್ಮ ತಬಲಾ ಪಾಂಡಿತ್ಯದ ಅಮೋಘ ಪ್ರದರ್ಶನ ನೀಡಿ ಸಿಡ್ನಿಯ ಕನ್ನಡಿಗರ ಅಪಾರ ಮೆಚ್ಚುಗೆಗೆ ಪಾತ್ರರಾದರು.

ಸಿಡ್ನಿಯ ಕನ್ನಡಿಗರೇ ಆದ ಶ್ರೀ: ರಾಮ ಕುಡ್ವ ಅವರು ಕೀ ಬೋರ್ಡ ನುಡಿಸಿದರು ಮತ್ತು ಕನ್ನಡ ಭಾಷಿಕರಲ್ಲದ ಶ್ರೀ: ನಾಗೇಶ್ ಅವರು ರಿದಂ ಪ್ಯಾಡ್ ನುಡಿಸಿ ಸಭಿಕರ ಮನಸೂರೆಗೊಂಡರು.



ಸಮಾರಂಭದ ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ರೈಡ್ ನಗರಸಭೆಯ ಮೇಯರ್ ಶ್ರೀ: ವಿಕ್ಟರ್ ಟ್ಯಾಗ್ ಅವರು ಮಾತನಾಡಿ, ಸಿಡ್ನಿ ಕನ್ನಡ ಸಂಘ ಮತ್ತು ಕನ್ನಡಿಗರನ್ನು ಅಭಿನಂದಿಸಿದರು. ಕನ್ನಡ ಕಲೆ ಮತ್ತು ಭಾಷೆಯನ್ನು ಉಳಿಸಿ ಬೆಳೆಸಿಕೊಂಡು ಬರುವ ಕಾರ್ಯಮಾಡುತ್ತಿರುವದನ್ನು ಶ್ಲಾಘಿಸಿದರು. ಶ್ರೀಮತಿ: ಸಂಗೀತಾರವರ ಕಲೆಯನ್ನು ಮೆಚ್ಚಿದ ಅವರು ರೈಡ್ ನಗರ ಸಭೆಯ ಪದಕವನ್ನು ನೀಡಿದರು. ಕನ್ನಡ ಸಂಘದ ಪರವಾಗಿ ಶಾಲು ಹೊದಿಸಿ










ಶ್ರೀ: ಉದಯರಾಜ್ ಕರ್ಪೂರ್ ಅವರಿಗೆ ಫಲಕ ನೀಡಿ ಗೌರವಿಸಲಾಯಿತು. ಶ್ರೀ: ರಾಮ ಕುಡ್ವ ಮತ್ತು ಶ್ರೀ: ನಾಗೇಶ್ ಅವರಿಗೂ ಫಲಕ ನೀಡಲಾಯಿತು.



ಏಷಿಯಾ ಪೆಸಿಫಿಕ್ ಕನ್ನಡ ಓಕ್ಕೂಟದ ಈ ಕಾರ್ಯಕ್ರಮದ ಪ್ರಾಯೋಜಕರಾದ ಮೈಸೂರಿನ ಪ್ರೀಮಿಯರ್ ಪ್ರಾಪರ್ಟೀಜ್ ನ ನಿರ್ವಾಹಕ ಶ್ರೀ: ರೋಹಿತ್ ಅರಸ್ ಅವರಿಗೂ ಈ ಸಂದರ್ಭದಲ್ಲಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.



ಪ್ರಾರಂಭದಲ್ಲಿ ಸಿಡ್ನಿ ಕನ್ನಡ ಸಂಘದ ಕಾರ್ಯದರ್ಶಿ ಶ್ರೀ: ವಿನಾಯಕ್ ಕಲ್ಲಪ್ಪ ಅವರು ಸಭಿಕರನ್ನು ಸ್ವಾಗತಿಸಿದರು. ಅಧ್ಯಕ್ಷೆ ಶ್ರೀಮತಿ: ಗೀತಾ ಗೋಪಿನಾಥ್ ಮಾತನಾಡಿ ಕನ್ನಡ ಸಂಘದ ಕಾರ್ಯಕ್ರಮಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು ಮತ್ತು ಶ್ರೀಮತಿ: ಸಂಗೀತಾ ಕಟ್ಟಿ ಅವರು ಸಿಡ್ನಿಯ ವಿಶ್ವವಿಖ್ಯಾತ ಅಪೆರಾ ಹೌಸ್ ನಲ್ಲಿ ಹಾಡಿದ ಅಪರೂಪದ ಸಂಧರ್ಭವನ್ನು ನೆನಪಿಸಿಕೊಂಡರು.




ಶ್ರೀಮತಿ: ಸಂಗೀತಾ ಕಟ್ಟಿ ಅವರು ಮಾತನಾಡಿ ತಮ್ಮ ಸಿಡ್ನಿ ಭೇಟಿಯ ಅನುಭವಗಳನ್ನು ಹಂಚಿಕೊಂಡರು. ತಮ್ಮ ಆಸ್ಟ್ರೇಲಿಯಾ ಭೇಟಿಯ ವಿಶೇಷ ಅನುಭವಗಳು ಬಹಳ ಕಾಲ ತಮ್ಮ ಮನದಲ್ಲಿ ಇರುವದೆಂದು ಹೇಳಿದರು. ಯಶಸ್ವಿ ಕಾರ್ಯಕ್ರಮವಲ್ಲದೇ ಸಿಡ್ನಿ ಕನ್ನಡಿಗರ ಆತಿಥ್ಯ, ಸ್ನೇಹ ಮತ್ತು ಅಭಿಮಾನಗಳು ತಮ್ಮ ಮನದಲ್ಲಿ ಬಹಳ ಕಾಲ ಹಸಿರಾಗಿರುವುದಾಗಿ ಹೇಳಿದರು.





ಕಾರ್ಯಕ್ರಮದ ನಿರೂಪಣೆಯನ್ನು ಯುವ ದಂಪತಿಗಳಾದ ಶ್ರೀ: ಬಾಲಾ ಮತ್ತು ಶ್ರೀಮತಿ: ವಿದ್ಯಾ ಮಾಡಿದರು. ಸಿಡ್ನಿ ಕನ್ನಡ ಸಂಘದ ಉಪಾಧ್ಯಕ್ಷ ಶ್ರೀ: ಗಿರಿ ಭಟ್ ವಂದನಾರ್ಪಣೆ ಮಾಡಿದರು.





ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ: ಸಂಗೀತಾ ಅವರು ಹಾಡಿದ "ವಂದೆ ಮಾತರಂ" ದೇಶಭಕ್ತಿ ಗೀತೆ-ಯು ತಾಯಿ ನಾಡಿನಿಂದ ಸಾವಿರಾರು ಕಿ. ಮೀ. ದೂರದಲ್ಲಿದ್ದರೂ ಸಿಡ್ನಿ ಕನ್ನಡಿಗರೆಲ್ಲರ ಮೈ ರೋಮಾಂಚನವಾಗುವಂತೆ ಮಾಡಿತು. ಕನ್ನಡದ ಕಲಾವಿದರಿಗೆ ಸಭಿಕರೆಲ್ಲರೂ ಎದ್ದು ನಿಂತು ದೀರ್ಘ ಕರ ತಾಡನದ ಮೂಲಕ ತಮ್ಮ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.



ವರದಿ: ವಿಜಯಕುಮಾರ್ ಹಲಗಲಿ